# <u>ಕರ್ನಾಟಕ ವಿಧಾನ ಪರಿಷತ್ತು</u>

ಸದಸ್ಯರ ಹೆಸರು : ಮಾನ್ಯ ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 915
ಉತ್ತರ ದಿನಾಂಕ : 18.12.2018

<table>
<tr><th>ಕ್ರ. ಸಂ:</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ)</td><td>ಕಳೆದ 5 ವರ್ಷಗಳಲ್ಲಿ (2013–2018) ಸರ್ಕಾರ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕದ ಸ್ಥಾಪನೆ ಮಾಡಲು ಗುರಿ ಹೊಂದಿತ್ತು; ಅದರಲ್ಲಿ ಎಷ್ಟು ಸ್ಥಾಪನೆ ಮಾಡಲಾಗಿದೆ; ಇನ್ನೂ ಎಷ್ಟು ಸ್ಥಾಪನೆ ಮಾಡಬೇಕಾಗಿದೆ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)</td><td>2013–14 ರಿಂದ 2018–19ನೇ ಸಾಲಿನವರೆಗೆ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆಯಿಂದ 15320 ನೀರು ಶುದ್ಧಿಕರಣ ಘಟಕಗಳನ್ನು ಅಳವಡಿಸಲು ಗುರಿ ಹೊಂದಿದ್ದು, ಇತರೆ ಅನುದಾನದಲ್ಲಿ ಅನುಷ್ಠಾನಗೊಳಿಸಿರುವ ಘಟಕಗಳು ಸೇರಿದಂತೆ ಒಟ್ಟಾರೆ 17992 ನೀರು ಶುದ್ಧಿಕರಣ ಘಟಕಗಳನ್ನು ಅಳವಡಿಸಲು ಕ್ರಮವಹಿಸಿದ್ದು, ಇಲ್ಲಿಯವರೆಗೆ 15565 ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದ್ದು, 14891 ನೀರು ಶುದ್ಧೀಕರಣ ಘಟಕಗಳು ಕಾರ್ಯಚರಣೆಯಲ್ಲಿರುತ್ತವೆ. ಬಾಕಿ 2427 ನೀರು ಶುದ್ಧೀಕರಣ ಘಟಕಗಳ ಅನುಷ್ಠಾನ ಪ್ರಕ್ರಿಯೆ ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. ಜಿಲ್ಲಾವಾರು & ತಾಲ್ಲೂಕುವಾರು ವಿವರವನ್ನು ಅನುಬಂಧ–1 & 1(A)ರಲ್ಲಿ ಲಗತ್ತಿಸಿದೆ.
<table>
<tr><th>ಇಲಾಖೆ / ಸಂಸ್ಥೆ</th><th>ವರ್ಷ</th><th>ಗುರಿ / ಒಟ್ಟು ಘಟಕಗಳು</th><th>ಸ್ಥಾಪನೆ (Installed)</th><th>ಕಾರ್ಯಾಚರಣೆ (Commissioned)</th></tr>
<tr><td rowspan="5">ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ</td><td>2013-14</td><td>1000</td><td>983</td><td>983</td></tr>
<tr><td>2014-15</td><td>2000</td><td rowspan="3">9487</td><td rowspan="3">9168</td></tr>
<tr><td>2015-16</td><td>4000</td></tr>
<tr><td>2016-17</td><td>4322</td></tr>
<tr><td>2017-18</td><td>4000</td><td>2702</td><td>2354</td></tr>
<tr><td colspan="2">ಒಟ್ಟು :</td><td>15322</td><td>13172</td><td>12505</td></tr>
<tr><td colspan="2">ವಿವಿಧ ಸಂಸ್ಥೆಗಳಿಂದ ಸ್ಥಾಪಿಸಲಾಗಿರುವ ಘಟಕಗಳು (ಇತರೆ ಅನುದಾನದಲ್ಲಿ) :</td><td>2670</td><td>2393</td><td>2386</td></tr>
<tr><td colspan="2">ಒಟ್ಟು :</td><td>17992</td><td>15565</td><td>14891</td></tr>
</table>
</td></tr>
<tr><td>ಆ)</td><td>ಕಳೆದ 5 ವರ್ಷಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲು ಎಷ್ಟು ಹಣ ಖರ್ಚು ಮಾಡಲಾಗಿದೆ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕಳೆದ 2013–14ನೇ ಸಾಲಿನಿಂದ 2018–19ನೇ ಸಾಲಿನವರೆಗೆ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ವೆಚ್ಚ ಭರಿಸಿದ ವಿವರವನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.</td></tr>
<tr><td>ಇ)</td><td>ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲು ಯಾವ ಸಂಸ್ಥೆ / ಕಂಪನಿಗೆ ಗುತ್ತಿಗೆ ನೀಡಲಾಗಿದೆ; ಯಾವ ನಿಯಮಾವಳಿಗಳನ್ನು ಪಾಲಿಸಿ ಗುತ್ತಿಗೆ ನೀಡಲಾಗಿದೆ? (ವಿವರವಾದ ಮಾಹಿತಿ ನೀಡುವುದು)</td><td>ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಟೆಂಡರ್ ಮುಖೇನ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಟೆಂಡರ್‌ನಲ್ಲಿ ಅನುಮೋದನೆಯಾದ ಏಜೆನ್ಸಿ /ಗುತ್ತಿಗೆದಾರರಿಗೆ ವಹಿಸಲಾಗಿದೆ (ವಿವರವನ್ನು ಅನುಬಂಧ–3ರಲ್ಲಿ ಲಗತ್ತಿಸಿದೆ). ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ (ಕೆ.ಟಿ.ಪಿ.ಪಿ. ಖಾಯ್ದೆ) ನಿಯಮಾವಳಿಗಳನ್ವಯ ಗುತ್ತಿಗೆ ನೀಡಲಾಗಿದೆ.</td></tr>
</table>

ಸಂ:ಗ್ರಾಅಪ 104 ಗ್ರಾನೀಸ(3)18

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು